‘ಅದಕ್ಕೆ ದುಡ್ಡೆಲ್ಲಿದೆ ನನ್ನ ಹತ್ರ? ಇಡೀ ಕಾರಗದ್ದೆ ಜನ ನನ್ನ ಬಂಧುಗಳು. ಏನು ಕೇಳಿದರೂ ಇಲ್ಲವೆನ್ನಲ್ಲ. ಸ್ವಲ್ಪ ಹಣ್ಣು ಹಂಪಲು ತಂದಿದೀನಿ, ತಿನ್ನು ಇವತ್ತಿಗೆ ಇದೇ ಆಹಾರ. ತಿಂದು ಈಗ ನನ್ನ ಜೊತೆ ಹೊರಡು...’ ಎಂದು ಆದೇಶಿಸಿದ.

‘ನಿನ್ನ ಬೆನ್ನು ನೋವು ಹೋಯಿತಾ? ನಿನ್ನೆವರೆಗೂ ನೋವು ಅನ್ನುತ್ತಿದ್ದೆ. ಈಗ ನೋಡಿದರೆ ಸರಿ ಇದ್ದೀಯಲ್ವ?’

‘ಯೋಗೀಶರು ಕೊಟ್ಟ ಮಾತ್ರೆ ರಾಮಬಾಣದ ಹಾಗೆ ಕೆಲಸ ಮಾಡಿತು. ಅಷ್ಟಕ್ಕೂ ಮನೆ ಕಟ್ಟುವ ಉತ್ಸಾಹದಲ್ಲಿ ನೋವಿದ್ದದ್ದೇ ತಿಳಿಯಲಿಲ್ಲ. ಮನುಷ್ಯನಿಗೆ ಎಲ್ಲಾ ಮನಸ್ಸಿನದ್ದು ನೋಡು. ಅವನ ಅನುಕೂಲಕ್ಕೆ ತಕ್ಕ ಹಾಗೆ ವರ್ತಿಸ್ತಾನ ಅಲ್ವಾ?’ ಜಂಪಯ್ಯ ತನ್ನ ವರ್ತನೆಯನ್ನು ತಾನೇ ವಿಶ್ಲೇಷಿಸಿಕೊಂಡವನು ಕಾಯಕನಾಥನನ್ನು ಒತ್ತಾಯವಾಗಿ ಹೊರಡಿಸಿದ. ಇಬ್ಬರೂ ಹಣ್ಣು ತಿಂದು, ಕಾಡಿನ ಕಡೆ ನಡೆದು ಬಂದರು. ಕುಮುದಿನಿ ದಾಟುವಾಗ ಕಾಯಕನಾಥ ಮುಖ ತೊಳೆದು ಅಲ್ಲೇ ಪೊದೆಯ ಬದಿಯಲ್ಲಿ ದೇಹ ಬಾಧೆ ತೀರಿಸಿಕೊಂಡ. ಜಂಪಯ್ಯನಿಗೆ ಕಾಯುವ ತಾಳ್ಮೆ ಕಿಂಚಿತ್ತೂ ಇರಲಿಲ್ಲ.

ಕಾಯಕನಾಥ ಜಂಪಯ್ಯನ ನಿರ್ದೇಶಿಸಿದಂತೆ ನಡೆಯತೊಡಗಿದ. ಸಣ್ಣ ಸಣ್ಣ ಪೊದೆ, ಗಿಡ ಗಂಟಿಗಳನ್ನು ದಾಟಿ ಮುನ್ನಡೆಯತೊಡಗಿದರು. ಜಂಪಯ್ಯ ತನಗೆ ಬೇಕಾದ ಮರಗಳನ್ನು ಆಯ್ಕೆ ಮಾಡಿಕೊಳ್ಳಲು ಪರೀಕ್ಷಾತ್ಮಕವಾಗಿ ನೋಡುತ್ತ ನಡೆಯುತ್ತಿದ್ದ. ಏರು ಬಿಸಿಲಿದ್ದರೂ ಸುತ್ತಲೂ ಆವೃತವಾದ ಮರಗಳು ಇವರಿಗೆ ಚಾಮರ ಬೀಸಿದಂತೆ ನೆರಳು ಕೊಟ್ಟು ನಿಂತಂತಿದ್ದವು.

ಜಂಪಯ್ಯ ತಾನೇ ಸೂಕ್ತವೆನಿಸಿದ ಸಪೂರಕ್ಕೆ ಉದ್ದವಿದ್ದ ಮರಗಳನ್ನು ಕಡಿಯತೊಡಗಿದಾಗ ಮಾತ್ರ ಕಾಯಕನಾಥನಿಗೆ ಸಹ್ಯವಾಗಲಿಲ್ಲ. ‘ಮನುಷ್ಯನ ಸ್ವಾರ್ಥಕ್ಕೆ ಪಾಪ ಮರಗಳಿಗೆ ಕೊಡಲಿ ಏಟು ಕೊಡುವುದು ಯಾವ ನ್ಯಾಯ? ಇದು ಸರಿಯಲ್ಲ ನಿನ್ನ ಈ ಪಾಪದ ಕೆಲಸದಲ್ಲಿ ನಾನು ಭಾಗಿಯಾಗಲಾರೆ’

‘ಅಯ್ಯೋ ನಾನು ಅದನ್ನು ಕಡಿದು ಉರುಳಿಸುತ್ತಿದ್ದೇನೆಯೇ? ಇಲ್ಲವಲ್ಲ? ಮರ ನಮಗೆ ಜೀವಜನಕ ಕೊಡುವುದು ಮಾತ್ರವಲ್ಲ ಇಂಥ ಉಪಕಾರವೂ ಮಾಡುತ್ತದೆ. ಹೂ ಹಣ್ಣು ಕೊಡುತ್ತವೆ. ಅದರ ಸಾರ್ಥಕತೆ ಇರೋದು ನಮ್ಮ ಸೇವೆಯಲ್ಲೇ ಕಣೋ. ಅದರ ಒಂದು ಗೆಲ್ಲು ಕಡಿದರೆ ಅದು ಮತ್ತೊಂದು ಕಡೆಯಿಂದ ಚಿಗುರೊಡೆಯುತ್ತದೆ. ಪ್ರಕೃತಿ ಅದನ್ನು ಸೃಷ್ಟಿಸಿರೋದು ಹಾಗೆಯೇ...’

ಜಂಪಯ್ಯ ಹಗುರವಾದ ದನಿಯಲ್ಲಿ ನುಡಿದ. ‘ಮನುಷ್ಯನ ಈ ಅತಿಕ್ರಮಣ ಬುದ್ಧಿ ನೋಡು. ನಿನ್ನ ಅನುಕೂಲಕ್ಕೆ ತಕ್ಕ ಹಾಗೆ ನೀನು ಸಮರ್ಥಿಸಿಕೊಳ್ಳುತ್ತಿದ್ದೀಯಾ ಅಷ್ಟೇ ಎಲ್ಲಾ ತಮ್ಮ ಅನುಕೂಲಕ್ಕಾಗಿಯೇ ಇದೆ ಎಂಬ ಅಹಂಭಾವ ಮನುಷ್ಯನಿಗೆ...’

ಜಂಪಯ್ಯನಿಗೆ ಕಾಯಕನಾಥನ ಉಪದೇಶ ಆಲಿಸುವ ತಾಳ್ಮೆ ಇರಲಿಲ್ಲ.

‘ಹೇ ಸ್ವಾಮೀ... ನಿಮ್ಮ ಉಪದೇಶ ಆಮೇಲೆ ಕೊಡಿ ಹೊತ್ತು ನೆತ್ತಿಗೇರಿದೆ.. ಬಂದ ಕೆಲಸ ಮಾಡೋಣವೇ? ಗೆಲ್ಲು ಹತ್ತಿ ಕಡಿದು ಮೊನ್ನೆ ಹಾಗೆ ಬಿದ್ದರೆ... ನನ್ನನ್ನು ನೀನು ಹೆಣದಂತೆ ಮತ್ತೆ ಹೊತ್ತುಕೊಂಡು ಹೋಗಬೇಕಾಗುತ್ತದೆ. ದಯಮಾಡಿ ನನಗೆ ಸಹಾಯ ಮಾಡು. ನನ್ನ ಜೀವನದ ಒಂದೇ ಆಸೆ ಮನೆ ಕಟ್ಟುವುದು. ಅದನ್ನು ನೆರವೇರಿಸು. ಪಾಪ ಪುಣ್ಯವೆಲ್ಲ ಆಮೇಲೆ ಲೆಕ್ಕ ಹಾಕೋಣ ಆಗದೇ..?’ ಜಂಪಯ್ಯ ಕೈಮುಗಿದು ಆರ್ತನಾಗಿ ನುಡಿದಾಗ ಕಾಯಕನಾಥ ತನ್ನ ಪಟ್ಟು ಸಡಿಲಿಸಲೇಬೇಕಾಯಿತು. ಜಂಪಯ್ಯ ತೋರಿಸಿದ ಉದ್ದ ಬಡಿಗೆಗಳನ್ನು ಕಾಯಕನಾಥ ಕಡಿದು ಹಾಕಿದ.

ಜಂಪಯ್ಯ ಕೆಳಗೆ ನಿಂತು ಅವನು ಕಡಿದು ಹಾಕಿದ್ದನ್ನು ಒಟ್ಟು ಮಾಡಿ ಗುಡ್ಡೆ ಹಾಕಿದ. ನೋಡು ನೋಡುತ್ತ ಕಟ್ಟಿಗೆಯ ರಾಶಿ ಅವನೆತ್ತರಕ್ಕೂ ಮೇಲೇರಿತು. ಸಿಕ್ಕ ಮರಗಳಿಂದ ಸ್ವಲ್ಪ ಸೀಬೆ ಹಣ್ಣುಗಳನ್ನು ಕೊಯ್ದಿಟ್ಟುಕೊಂಡರು. ಆಯಾಸ ಪರಿಹರಿಸಿಕೊಳ್ಳಲು ಇಬ್ಬರೂ ಸಣ್ಣ ಮಣ್ಣಿನ ದಿಬ್ಬದ ಮೇಲೆ ಕುಳಿತು ಸೀಬೆಯನ್ನು ಕಚ್ಚಿ ತಿನ್ನತೊಡಗಿದರು. ಜಂಪಯ್ಯ ಒಂದೇ ಉಸಿರಿಗೆ ನೆಗೆದು ಬಿದ್ದು ಚಿತ್ರವಿಚಿತ್ರವಾಗಿ ಕುಣಿಯತೊಡಗಿದ. ಏನಾಯಿತೆಂದು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಕಾಯಕನಾಥನೂ ಜಂಪಯ್ಯನಿಗೆ ಜೊತೆ ನೀಡಿದ. ಇಬ್ಬರೂ ಉಟ್ಟ ಪಂಚೆ ಬಿಚ್ಚಿ ಕೊಡವತೊಡಗಿದರು. ಕೆಂಪಿರುವೆಗಳು ನಿರ್ದಾಕ್ಷಿಣ್ಯವಾಗಿ ತಮ್ಮ ಪ್ರಾಬಲ್ಯ ತೋರಿಸಿದ್ದವು. ಉರಿ ತಾಳಲಾರದೇ ಇಬ್ಬರೂ ನದಿಯ ಕಡೆಗೆ ಓಡಿ ಹಾರಿ ಮುಳುಗಿ ಕುಳಿತರು. ಕಾಯಕನಾಥ ಜಂಪಯ್ಯನ ಕಡೆಗೆ ಉರಿನೋಟ ಬೀರುತ್ತ ನುಡಿದ, ‘ಎಲ್ಲಾ ನಿನ್ನಿಂದಲೇ ಆಗಿದ್ದು’ ಜಂಪಯ್ಯ ಪೆಕರನಂತೆ ನಕ್ಕ.

‘ಇಷ್ಟು ಸಣ್ಣ ಜೀವ ಜಂತು... ಅದೆಷ್ಟು ಶಕ್ತಿ ಇದೆ ನೋಡು ಅವಕ್ಕೆ ಯಾವುದನ್ನೂ ಕಡೆಗಣಿಸುವಂತಿಲ್ಲ ಮಾರಾಯ...’ ಜಂಪಯ್ಯ ಉರಿ ಕಮ್ಮಿಯಾಗುತ್ತಲೇ ನುಡಿದ. ಕಾಯಕನಾಥ ಪ್ರತಿಕ್ರಿಯಿಸದೇ ಸುಮ್ಮನೇ ಸಿಟ್ಟಿನಿಂದ ಹಲ್ಲು ಕಚ್ಚಿ ಹಿಡಿದು ಕೋಪ ಅದುಮಿಕೊಂಡ. ಇದೆಂಥ ಮನುಷ್ಯನ ನಡುವೆ ಸಿಕ್ಕಿಕೊಂಡೆ ಎಂದು ಮಿಡುಕಿದ.

ಇಬ್ಬರೂ ನಡೆದುಕೊಂಡು ಮತ್ತೆ ಕಟ್ಟಿಗೆಯ ರಾಶಿಯ ಕಡೆಗೆ ಬಂದರು. ಕಾಯಕನಾಥ ಕಟ್ಟಿಗೆಗಳನ್ನು ಒಂದೊಂದಾಗಿ ಹೆಕ್ಕಿ ಜಂಪಯ್ಯನ ತಲೆ ಮೇಲೆ ಹೊರೆಸಿ ಇಡತೊಡಗಿದ. ಮನೆ ಕಟ್ಟುವ ಉತ್ಸಾಹದಲ್ಲಿದ್ದ ಜಂಪಯ್ಯನಿಗೆ ಅದೇನೂ ಹೊರೆಯೆನಿಸಲಿಲ್ಲ. ‘ಇನ್ನೂ ನಾಲ್ಕಿಡು ನಾವಿಬ್ಬರೂ ಕನಿಷ್ಠ ಐದಾರು ಬಾರಿಯಾದರೂ ಬಂದು ಹೊರಬೇಕಾದೀತು’ ಎಂದ.

ಅವನು ಹೊತ್ತು ನಡೆದ ಬಳಿಕ ತನ್ನ ಕೈಲಿ ಎಷ್ಟು ಜಾಸ್ತಿ ಸಾಧ್ಯವೋ ಅಷ್ಟು ಹೊತ್ತು ಕಾಯಕನಾಥ ಜಂಪಯ್ಯನನ್ನು ಹಿಂಬಾಲಿಸಿದ. ಐದಾರು ಬಾರಿ ಅಲೆದಾಡಿ ಇಡೀ ಕಟ್ಟಿಗೆಯ ರಾಶಿಯನ್ನು ಹೊತ್ತು ಅಜ್ಜರಕಾಡಿನ ಬಯಲಿನಂಥ ಜಾಗದಲ್ಲಿ ಪೇರಿಸಿಟ್ಟರು. ಜಂಪಯ್ಯ ಹೆಚ್ಚು ಸುಪ್ರೀತನಾಗಿದ್ದ. ಅದೇ ಲಹರಿಯಲ್ಲಿ ಏನೇನೋ ಬಡಬಡಿಸುತ್ತಿದ್ದ. ದೇಹ ಹೆಚ್ಚು ದಣಿದಿದ್ದರಿಂದ ಕಾಯಕನಾಥ ಅವನು ಕೊಟ್ಟ ಹಣ್ಣುಗಳನ್ನು ತಿಂದವನೇ ಅಡ್ಡಾದ. ಆ ರಾತ್ರಿ ಹೇಗೋ ಸರಿದು ಹೋಯಿತು.

## ಜಂಪಯ್ಯನಿಗೆ ಮನೆ ನಿರ್ಮಾಣ

ಜಂಪಯ್ಯ ಮರುದಿನ ಬೇಗ ಎದ್ದವನೇ ಅತ್ತಿತ್ತ ಅಲೆದಾಡುತ್ತ ಏನೋ ಗುಣಕಾರ ಭಾಗಾಕಾರ ಹಾಕಿದ. ಸೂರ್ಯ ಹುಟ್ಟುವ ದಿಕ್ಕು ಗುರುತು ಹಾಕಿಕೊಂಡ. ಕುಮುದಿನಿ ಹರಿವ ರಭಸ, ಮಳೆಗಾಲದಲ್ಲಿ ಏರಬಹುದಾದ ನೀರಿನ ಮಟ್ಟ ಅಂದಾಜಿಸಿದ. ಕಾರಗದ್ದೆ ಸೇತುವೆಯ ಹಾದಿ, ಅದರ ದೂರ ಮನನ ಮಾಡಿಕೊಂಡ. ಕಾಡಿನ ದಾರಿಯಿಂದ ಪ್ರಾಣಿಗಳು ಬರುವ ಸಾಧ್ಯತೆ ಕಮ್ಮಿ ಇರುವ ಜಾಗವೆಂದು ಖಾತ್ರಿ ಪಡಿಸಿಕೊಂಡ. ಎಲ್ಲಾ ರೀತಿಯಿಂದಲೂ ಅನುಕೂಲಕರವೆಂದೆನಿಸಿದ ಜಾಗ ಗುರುತು ಮಾಡಿಕೊಂಡವನೇ ಹೋಗಿ ನೀರಿನಲ್ಲಿ ಐದು ಬಾರಿ ಮುಳುಗೆದ್ದು, ಅವನು ನಿತ್ಯ ಪೂಜಿಸುವ ಕಲ್ಲಿಗೆ ಪ್ರಾರ್ಥನೆ ಮಾಡಿ ಗುದ್ದಲಿ ಪೂಜೆ ನಡೆಸಿಯೇ ಬಿಟ್ಟ. ಅದನ್ನು ನೋಡುತ್ತ ಕೂರಲು ಕಾಯಕನಾಥನಿಂದ ಸಾಧ್ಯವಾಗಲಿಲ್ಲ. ಕಟ್ಟಡದ ಕೆಲಸವೇ ಮಾಡಿಕೊಂಡಿದ್ದ ಕಾಯಕನಾಥನ ಅನುಭವ ಈಗ ಸಹಾಯಕ್ಕೆ ಬಂದಿತು. ಉದ್ದಕ್ಕೆ ತೋಡಿನಂತೆ ಪಾಯ ತೆಗೆದು ತಂದಿದ್ದ ಮರದ ಗೆಲ್ಲುಗಳನ್ನು ಗೋಡೆಯ ಮಾದರಿಯಲ್ಲಿ ನಿಲ್ಲಿಸುತ್ತಾ, ಬಿಳಲುಗಳ ಬಳ್ಳಿಯಿಂದ ಅದನ್ನು ಗಟ್ಟಿಯಾಗಿ ಹೆಣೆದು ಕಟ್ಟಿ ಮಣ್ಣನ್ನು ಮುಚ್ಚಿ ಮರದ ಗೋಡೆಯನ್ನು ನಿಲ್ಲಿಸುವಲ್ಲಿ ಸಫಲರಾದರು. ಇಬ್ಬರೂ ಹಸಿವು, ನೀರಡಿಕೆಯನ್ನು ಮರೆತು ಸಂಪೂರ್ಣವಾಗಿ ಆ ಕೆಲಸದಲ್ಲಿ ನಿರತರಾದರು. ಕೆಲವು ಮರದ ಗೆಲ್ಲುಗಳು ಮುರಿದವು. ಕೆಲವು ಗಿಡ್ಡವಾಗಿದ್ದವು. ಕೆಲವು ಅಂಕುಡೊಂಕಾಗಿದ್ದು, ನಿಲ್ಲಿಸಿದಾಗ ಸ್ವಲ್ಪ ಹೆಚ್ಚೇ ಸಂದುಗಳು ಕಾಣುತ್ತಿದ್ದರಿಂದ ಉಪಯೋಗವಾಗದೇ ಬದಿಗಿರಿಸಿದರು. ಇಬ್ಬರಲ್ಲೂ ಉತ್ಸಾಹ ಅಪರಿಮಿತವಾಗಿತ್ತು. ಕಾಯಕನಾಥ ತನ್ನ ದುಃಖ ದುಮ್ಮಾನ ಮರೆತು ಆ ಕೆಲಸದಲ್ಲಿ ತೊಡಗಿಸಿಕೊಂಡಿದ್ದ.

(ಸಶೇಷ)

### ಧಾವಂತ

ಬೇಕಾಗಿದೆ ಕಡಿವಾಣ ಕಾಯಾ, ವಾಚಾ, ಮನಸಿಗೆ
ಹಾಕಿದೆ ನಿರ್ಬಂಧ ಈ ಸೋಂಕು ಇಡೀ ಜಗತ್ತಿಗೆ!
ಊರು, ಕೇರಿ ಬಿಟ್ಟು ದೇಶ ಸುತ್ತುವ ಉಸಾಬರಿ
ಮನೆಯಲ್ಲಿ ನೆಮ್ಮದಿ ಕಾಣಬೇಕೆಂಬುದೇ ಸರಿ!
ಊಟ ಉಪಚಾರ ಇಲ್ಲದ ಹೊರಗಿನ ತಿನಿಸು,
ಬಹಳ ರುಚಿಯೆಂದು ಸವಿದವರಿಗೆ ಇಂದು ಮುನಿಸು!
ಬಹಿರಂಗ, ವ್ಯಾಮೋಹ ನೀರ ಮೇಲಿನ ಗುಳ್ಳೆ
ಅಂತರಂಗದ ಕದ ತಟ್ಟಬೇಕಾಗಿದೆ ಈ ಗಳಿಗೆ!
ಧಾವಂತ ಬದುಕಿಗೆ ಒಂದು ವೈರಾಣು ಕಲಿಸಿದೆ ಪಾಠ
ಪ್ರಕೃತಿ ನಿಯಮ ಮೀರಿ ಬೆಳೆದ ಬದುಕಿಗೆ!

— ವಿಜಯಲಕ್ಷ್ಮಿ ಶಿವರಾಂ